ಶ್ರೀ ಎಸ್. ಪುಟ್ಟಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ, ಈಗ ಸಚಿವರು ಗಮನ ಸೆಳೆಯುವ ಸೂಚನೆಗೆ ಉತ್ತರವಾಗಿ, ಈಗಾಗಲೇ ಅಗರಬತ್ತಿ ಉದ್ಯಮದಲ್ಲಿ ತೊಡಗಿರತಕ್ಕವರು ಕೊಟ್ಟಿಂಥ ಮನವಿಯನ್ನು ಆದರಿಸಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆದು ಅವರ ಜೊತೆ ಚರ್ಚೆ ಮಾಡಿ, ಅಗರಬತ್ತಿ ತಯಾರು ಮಾಡುವವರಿಗೆ ಅವಶ್ಯಕವಾಗಿ ಬೇಕಾಗತಕ್ಕಂಥ ಕಚ್ಚಾ ಪದಾರ್ಥಗಳನ್ನು ಮತ್ತೆ ಈ ಉದ್ಯಮದಲ್ಲಿ ತೊಡಗಿರತಕ್ಕವರಿಗೆ ತರಬೇತಿ ಕೆಲಸಕ್ಕೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದು ಸಮರ್ಪಕವಾಗಿ, ವ್ಯವಸ್ಥಿತವಾಗಿ ನಡೆದಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಮತ್ತೊಮ್ಮೆ ಅದರ ಬಗ್ಗೆ ವಿವರವಾದಂಥ ವರದಿಯನ್ನು ತರಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಕಚ್ಚಾ ಮಾಲುಗಳನ್ನು ಒದಗಿಸತಕ್ಕ ವ್ಯವಸ್ಥೆ ಮತ್ತು ಕೆಲಸಗಾರರಿಗೆ ತರಬೇತಿ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಏನು ತೀರ್ಮಾನ ಆಗಿದೆಯೋ ಅದರ ಬಗ್ಗೆ ಸರಿಯಾದಂಥ ವ್ಯವಸ್ಥೆ ಮಾಡಬೇಕು. ಮತ್ತೆ ಅವರ ಮನವಿಯಲ್ಲಿ ಉದ್ದಿಮೆದಾರರು ನಾವೇ ನಮ್ಮ ಪರವಾಗಿ ಮಾರುಕಟ್ಟೆ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರದ ಪರವಾಗಿ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳಿಕೊಂಡಿದ್ದಾರೆಂದು ತಿಳಿದುಬಂದಿದೆ. ಅಗರಬತ್ತಿ ಉದ್ದಿಮೆದಾರರುಗಳು ಉತ್ಪನ್ನ ಮಾಡತಕ್ಕಂಥ ಅಗರಬತ್ತಿಯನ್ನು ಮಾರಾಟ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಮಾರ್ಕೆಟ್ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದವರು ಏನು ವ್ಯವಸ್ಥೆಮಾಡುತ್ತಾರೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಮಾನ್ಯ ಪುಟ್ಟಸ್ವಾಮಿಯವರು ತರಬೇತಿಯನ್ನು ಕೊಡುವುದಾಗಲಿ, ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವುದಾಗಲಿ, ಸಮರ್ಪಕವಾಗಿ ನಡೆಯುತ್ತಿಲ್ಲ ಎನ್ನುವುದನ್ನು ಹೇಳಿದ್ದಾರೆ ಅದರ ಬಗ್ಗೆ ನಾನು ಪುನರ್ ಪರಿಶೀಲನೆ ಮಾಡುತ್ತೇನೆ ಮತ್ತೆ ಇನ್ನೊಂದು ಸಭೆಯನ್ನು ಕರೆದು ಚರ್ಚೆ ಮಾಡಿ ಅವರ ಸಮಗ್ರ ಅಭಿವೃದ್ಧಿಗೆ ಕಚ್ಚಾ ವಸ್ತುಗಳ ಸಾಮಗ್ರಿಗಳನ್ನು ಅವರಿಗೆ ಒದಗಿಸಲಿಕ್ಕೆ ಎಲ್ಲ ಏರ್ಪಾಡು ಮಾಡುತ್ತೇನೆ ಮಾರುಕಟ್ಟೆಯ ವ್ಯವಸ್ಥೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ ಎನ್ನುವ ಬಗ್ಗೆ ಅಧಿಕಾರಿಗಳ ಸಭೆಯನ್ನು ಕರೆದು ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರನ್ನು ಸಹ ನಾನು ಆ ಸಭೆಗೆ ಆಹ್ವಾನ ಮಾಡುತ್ತೇನೆ.

೩. ಸಿ.ಪಿ.ಎಡ್. ಪರೀಕ್ಷೆಯಲ್ಲಿ ಪಠ್ಯಕ್ರಮದಲ್ಲಿ ಸೇರಿಸದ ವಿಷಯಂಗಳ ಕುರಿತು ಪ್ರಶ್ನೆಗಳನ್ನು ಕೇಳಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೮ನೇ ಏಪ್ರಿಲ್‌ನಲ್ಲಿ ನಡೆದ ಸಿ.ಪಿ.ಎಡ್ ಪರೀಕ್ಷೆಯಲ್ಲಿ ಪಠ್ಯಕ್ರಮದಲ್ಲಿ ಸೇರಿಸದ ವಿಷಯವನ್ನು ಪ್ರಶ್ನೆ ಪತ್ರಿಕೆಗಳಲ್ಲಿ ಕೇಳಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.—ಸಿ.ಪಿ.ಎಡ್. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಸಿ.ಪಿ.ಎಡ್, ಕಾಲೇಜುಗಳ ಪ್ರಾಂಶುಪಾಲರು ಅಥವಾ ಹಿರಿಯ ಉಪನ್ಯಾಸಕರುಗಳು ತಯಾರಿಸುತ್ತಾರೆ ಈ ಪ್ರಶ್ನೆ ಪತ್ರಿಕೆಗಳನ್ನು ಪಠ್ಯಕ್ರಮದ ಆನುಗುಣವಾಗಿ ತಯಾರಿಸಲಾಗುತ್ತದೆ. ಈ ಬಗ್ಗೆ ಎಲ್ಲಾ ನಿಯಮಗಳನ್ನು ಪಾಲಿಸಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲಾಗಿದೆಯೆಂದು ಪ್ರಮಾಣೀಕರಿಸುತ್ತಾರೆ. ಪ್ರಶ್ನೆಪತ್ರಿಕೆಗಳನ್ನು ತಯಾರಿಸುವುದರಿಂದ ಹಿಡಿದು ಮೌಲ್ಯಮಾಪನದವರೆಗೆ ಪರೀಕ್ಷಾ ಮಂಡಳಿ ಯಾವ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ ಈ ವಿಷಯದ ಪರೀಕ್ಷಾ ಸಮಯದಲ್ಲಾಗಲೀ ಮೌಲ್ಯಮಾಪನದ ಸಮಯದಲ್ಲಾಗಲೀ ಅಭ್ಯರ್ಥಿಗಳಿಂದ ಯಾವ ದೂರುಗಳು ಬಂದಿರುವುದಿಲ್ಲ. ಪರೀಕ್ಷಾ ವಿಷಯವು ಗೌಪ್ಯವಾಗಿ ನಡೆಸಲ್ಪಡುವುದರಿಂದ ಈ ಪ್ರಶ್ನೆಪತ್ರಿಕಾ ತಯಾರಕರನ್ನು ಖುದ್ದಾಗಿ ಕರೆಯಿಸಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ನಮ್ಮ ಪ್ರಶ್ನೆ ಇರುವುದು ಏನೆಂದರೆ ಸಿಲಬಸ್ ಬಿಟ್ಟು ಬೇರೆ ಪ್ರಶ್ನೆ ಕೊಟ್ಟಿದ್ದಾರೆ ಎಂದು ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ನಾವು ಹೇಳಿದ್ದೇವೆ ಇವರು ಇಲ್ಲ ಎಂದು ಒಂದೇ ಒಂದು ಮಾತಿನಲ್ಲಿ ಹೇಳಿದ್ದಾರೆ. ಆದರೆ ಪ್ರಶ್ನೆ ಪತ್ರಿಕೆ

ಒಂದನೆಯದು ಆದರಲ್ಲಿ ೫ ಮತ್ತು ೬ ಅದು ಆದಮೇಲೆ ಪೇಪರ್ ೩ರಲ್ಲಿ ೬ ಎ.ಬಿ. ಮತ್ತು ೭ಎ ಏನು ಇದೆ ಅದು ಸಿಲಬಸ್‌ನಲ್ಲಿ ಕವರ್ ಆಗಿಲ್ಲ ಪ್ರಶ್ನೆಗಳಿಗೆ ಉತ್ತರ ಸಿಲಬಸ್‌ನಲ್ಲಿ ಇಲ್ಲ. ಇವರು ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ. ಅವರು ಯಾವ ಉಲ್ಲಂಘನೆಯನ್ನು ಮಾಡಿಲ್ಲವೆಂದು ಹೇಳುತ್ತಾರೆ. ಇವತ್ತು ಸಿಲಬಸ್ ಪ್ರಕಾರ ಪ್ರಶ್ನೆಯನ್ನು ಕೊಡಬೇಕಾಗುತ್ತದೆ ಸಿಲಬಸ್‌ನ್ನು ಬಿಟ್ಟು ಹೋಗಲಿಕ್ಕೆ ಆಗುವುದಿಲ್ಲ. ಅವರು ಯಾವರೀತಿ ಸಿಲಬಸ್ ಬಿಟ್ಟು ಹೊರಗಡೆ ಪ್ರಶ್ನೆಯನ್ನು ಹಾಕಿದರು ಇದರಿಂದ ಹುಡುಗರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ತಾವೇ ಅವರನ್ನು ಬೇಕಾದರೆ ಖುದ್ದಾಗಿ ಕರೆಸಿ ಕೊಂಡು ಇದು ನಿಜವೇ ಅಥವಾ ಸತ್ಯಕ್ಕೆ ದೂರವಾದ ವಿಷಯವೇ ತಿಳಿದುಕೊಳ್ಳಿ ೨–೩ ಪ್ರಶ್ನೆಗಳು ಸಿಲಬಸ್‌ನಿಂದ ಹೊರಗಡೆ ಇದ್ದರೆ ಅವರಿಗೆ ನೀವು ಗ್ರೇಸ್ ಮಾರ್ಕ್ಸ್ ಕೊಡಬೇಕಾಗುತ್ತದೆ ಇಲ್ಲದಿದ್ದರೆ ಮತ್ತೊಮ್ಮೆ ಮರು ಪರೀಕ್ಷೆ ಮಾಡಬೇಕಾಗುತ್ತದೆ. ಆದ್ದರಿಂದ ಇವತ್ತು ಅವರನ್ನು ಕರೆಸಿ ಪುನರ್ ಪರಿಶೀಲನೆ ಮಾಡಬೇಕು ಹಾಗೂ ಇದು ಸಿಲಬಸ್‌ನಿಂದ ಹೊರಗಡೆ ಇದೆ ಎನ್ನುವುದನ್ನು ಒಪ್ಪುತ್ತೀರಾ ಹೇಗೆ ?

ಶ್ರೀ ಎಂ ವೀರಪ್ಪ ಮೊಯಿಲಿ.—ಇಲ್ಲಿ ತಾಂತ್ರಿಕವಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದಾರೆ ಆದರೆ ಇದು ತಾಂತ್ರಿಕವಾದ ಪ್ರಶ್ನೆ ಅಲ್ಲ ನಮ್ಮ ಸನ್ಮಾನ್ಯ ಉಪನಾಯಕರು ಇವರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ನಿಗದಿಪಡಿಸಿದಂತಹ ವಿಷಯಗಳನ್ನು ಬಿಟ್ಟು ಬೇರೆ ಪ್ರಶ್ನೆಗಳನ್ನು ಕೇಳಲಾಗಿದೆ ಎನ್ನುವುದನ್ನು ಹೇಳಿದ್ದಾರೆ, ಇದರಿಂದ ವಿದ್ಯಾರ್ಥಿಗಳಿಗೆ ಉತ್ತರಿಸಲಿಕ್ಕೆ ಸಾಧ್ಯವಾಗಿಲ್ಲ, ಈಗಿ ತಾವು ಎಲ್ಲ ನಿಯಮಗಳನ್ನು ಪಾಲಿಸಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲಾಗಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. We have to question the propriety of the persons who have put the questions...ಇಲ್ಲಿ ಏನು ಹೇಳಿದ್ದೀರಿ ಎಂದರೆ ಈ ಪ್ರಶ್ನೆ ಪತ್ರಿಕೆಗಳನ್ನು ಪಠ್ಯಕ್ರಮದ ಅನುಗುಣವಾಗಿ ತಯಾರಿಸಲಾಗುತ್ತದೆ. ಈ ಬಗ್ಗೆ ಎಲ್ಲಾ ನಿಯಮಗಳನ್ನು ಪಾಲಿಸಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲಾಗಿದೆಯೆಂದು ಪ್ರಮಾಣೀಕರಿಸುತ್ತಾರೆ. ಪ್ರಶ್ನೆಪತ್ರಿಕೆಗಳನ್ನು ತಯಾರಿಸುವುದರಿಂದ ಹಿಡಿದು ಮೌಲ್ಯಮಾಪನದವರೆಗೆ ಪರೀಕ್ಷಾ ಮಂಡಳಿ ಯಾವ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲವೆಂದು ಹೇಳಿದ್ದೀರಿ. ಟೆಕ್ನಿಕಲ್ ಟರ್ಮ್‌ನಲ್ಲಿ ಉತ್ತರ ಕೊಟ್ಟಿರುವುದು ಸರಿಯಲ್ಲ ಈ ಬಗ್ಗೆ ಯಾವುದೂ ದೂರುಗಳು ಬಂದಿಲ್ಲವೆಂದರೆ ಹೇಗೆ ? ಪತ್ರಿಕೆಗಳಲ್ಲಿ ಬಂದು ನಾವು ಅಸೆಂಬ್ಲಿಯಲ್ಲಿ ಎತ್ತಬೇಕಾದರೆ ಯಾವ ದೂರುಗಳು ಬಂದಿಲ್ಲ ಎಂದು ಪರೀಕ್ಷಾ ಮಂಡಲಿಯವರು ಮಾನ್ಯ ಸಚಿವರ ಮುಖಾಂತರ ಉತ್ತರ ಕೊಡಿಸಬೇಕಾದರೆ there is no nexus between Ministers functioning and the Legislature functioning and the Executive functioning. There is no responsive Government...ಇದು ಬಹಳ ತಪ್ಪಾಗುತ್ತದೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಇಲ್ಲವೆಂದು ಪೆಳಿದಂತಾಗುತ್ತದೆ. ಯಾವ ದೂರೂ ಬರಲಿಲ್ಲ ಎಂದರೆ ಹೇಗೆ ?

ಇನ್ನು ಮತ್ತೊಂದು ವಿಚಾರ ಎಂದರೆ ಇವತ್ತು ನಾವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಹಾಕಿದ್ದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ ಇವರಿಗೆ ಸಾಕಷ್ಟು ಕಾಲಾವಕಾಶ ಇತ್ತು ಎಂಬುದು. ಇವರು ಯಾರನ್ನು ಕನ್ಸಲ್ಟ್ ಮಾಡಿದ್ದಾರೆಂದರೆ ಯಾರು ಪ್ರಶ್ನೆಪತ್ರಿಕೆಯನ್ನು ಕೊಟ್ಟಿದ್ದಾರೆ ಅವರನ್ನೇ ಇವರು ಕನ್ಸಲ್ಟ್ ಮಾಡಿದ್ದಾರೆ. ಇದು ಸರಿಯಲ್ಲ. ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಬೇಕು ಸಮಗ್ರ ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಎಲ್ಲ ವಿಚಾರಗಳನ್ನೂ ಎಕ್ಸಾಮಿನ್ ಮಾಡಿಕೊಂಡು ನಂತರ ಉತ್ತರ ಕೊಡಬೇಕಾಗಿತ್ತು ಯಾರು ಪ್ರಶ್ನೆ ಪತ್ರಿಕೆಯನ್ನು ತಯಾರಿಸಿದ್ದಾರೆ ಅವರನ್ನು ಇವರು ಕರೆಸಿ ಕನ್ಸಲ್ಟ್ ಮಾಡಿರತಕ್ಕದ್ದು. ಇದು ಸರಿಯಲ್ಲ ನಿಮ್ಮ ಎಜುಕೇಷನ್ ಕಾರ್ಯದರ್ಶಿಯವರ ಮುಖಾಂತರ ಇದನ್ನು ವಿಚಾರಣೆ ಮಾಡಿಸಬೇಕು ಪ್ರಶ್ನಪತ್ರಿಕೆಯನ್ನು ಯಾರು ತಯಾರಿಸಿದ್ದಾರೆ ಅವರನ್ನು ಹೊರತುಪಡಿಸಿ ಬೇರೆ ಪರಿಣತರನ್ನು ಕರೆಸಿಕೊಂಡು ಪ್ರಶ್ನಪತ್ರಿಕೆಯನ್ನು ಸಿಲಬಸ್‌ಗೆ ಅನುಗುಣವಾಗಿ ತಯಾರಿಸಲಾಗಿದೆಯೆ ಅಥವಾ ಇಲ್ಲವೇ ? ಇದರಿಂದ ವಿದ್ಯಾರ್ಥಿಗಳಿಗೆ ಏನಾದರೂ ಅನ್ಯಾಯವಾಗಿದೆಯೇ ಎಂಬುದನ್ನು ಪರಿಶೀಲಿಸಿ ವಿದ್ಯಾರ್ಥಿಗಳಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳಿಗೆ ಈರೀತಿ ಸರ್ಕಾರದಿಂದ ಉತ್ತರ ಬಂದರೆ ಅದರಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೆ, ಅಂಗೀಕರಿಸಲ್ಪಟ್ಟ ಪಠ್ಯ ಪುಸ್ತಕಗಳಂ ಏನಿರುತ್ತವೆ, ಅವುಗಳಲ್ಲಿರತಕ್ಕ ಪ್ರಶ್ನೆಗಳನ್ನೇ ಪರೀಕ್ಷೆಗೆ ಕೊಡಿಸತಕ್ಕ ಕೆಲಸವನ್ನು ಇಲಾಖೆಯವರು ಮಾಡಬೇಕು. ಆದರೆ ಸಿಲಬಸ್‌ನಲ್ಲಿ ಇಲ್ಲದಿರತಕ್ಕ ಪ್ರಶ್ನೆಗಳನ್ನು ಕೊಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಉತ್ತರ ಬರೆಯುವುದಕ್ಕೆ ಸಾಧ್ಯವಾಗಿಲ್ಲ. ಇದು ಏಕೆ ಹೀಗಾಗಿದೆ ಎಂದರೆ, ಯಾರಿಗೆ ಸಿಲಬಸ್ ಗೊತ್ತಿಲ್ಲ, ಅಂಥವರಿಂದ ಈ ಪ್ರಶ್ನೆಪತ್ರಿಕೆಗಳನ್ನು ಸೆಟ್ ಮಾಡಿಸಿರುವುದರಿಂದ. ಇಲ್ಲಿ ಒಂದು ವಿಷಯ ಇದೆ. Psychology and History of physical education ಏನೇ ಪ್ರಶ್ನೆಯಲ್ಲಿ write short notes on any 4 of the following ಎಂದು ಕೇಳಿದ್ದಾರೆ. ಇದರಲ್ಲಿ ೫, ೬ನೇ ಪ್ರಶ್ನೆಗಳು ಔಟ್ ಆಫ್ ಸಿಲಬಸ್ ಆಗಿವೆ. ಒಂದು ವೇಳೆ ಇವು ಸಿಲಬಸ್‌ನಲ್ಲಿವೆ ಎಂದು ಮಾನ್ಯ ಸಚಿವರು ಹೇಳುವುದಾದರೆ ಇದು ಎಲ್ಲಿದೆ ಎಂಬುದನ್ನು ಸಚಿವರು ತೋರಿಸಬೇಕು.

ಇನ್ನೊಂದು ವಿಷಯ ಇಲ್ಲಿದೆ. ಇಲ್ಲಿ ಅಟಾನಮಿ, ಸೈಕಾಲಜಿ, ಹೆಲ್ತ್ ಎಜುಕೇಷನ್, ಸೇಫ್ಟಿನಿ ಎಜುಕೇಷನ್ ಈ ಪೇಪರ್‌ನಲ್ಲಿಯೂ ಕೂಡ ೬ನೇ ಪ್ರಶ್ನೆಯನ್ನು ಏನು ಕೇಳಿದ್ದಾರೆಂದರೆ, ೬ನೇ ಪ್ರಶ್ನೆಯಲ್ಲಿ, ''ಎ, ಬಿ'' ಮತ್ತು ೭ನೇ ಪ್ರಶ್ನೆಯಲ್ಲಿ ''ಎ, ಬಿ'' ಎಂದು ೪ ಪ್ರಶ್ನೆಗಳನ್ನು ಕೇಳಿದ್ದಾರೆ. ಈ ೪ ಪ್ರಶ್ನೆಗಳಿಂದ ಸುಮಾರು ೩೦ ಅಂಕಗಳನ್ನು ಇಟ್ಟಿದ್ದಾರೆ. ಇವು ಔಟ್ ಆಫ್ ಸಿಲಬಸ್ ಆಗಿರುವುದರಿಂದ ವಿದ್ಯಾರ್ಥಿಗಳು ಉತ್ತರವನ್ನು ಬರೆಯುವುದಕ್ಕೆ ಆಗಿಲ್ಲ. ೩೦ ಅಂಕಗಳನ್ನು ಇಟ್ಟಿರತಕ್ಕ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಬಿಟ್ಟರೆ ಇನ್ನು ಅವರು ಪಾಸ್ ಆಗುವುದಾದರೂ ಹೇಗೆ ? ಪತ್ರಿಕೆ ೧ರಲ್ಲಿ Principlas of History of Physical education ಇದರಲ್ಲಿ ಕ್ವೆಶ್ಚನ್ ನಂಬರ್ ೧, ೨, ೩, ಏನಿವೆ ಇವು ಔಟ್ ಆಫ್ ಸಿಲಬಸ್ ಇವೆ. ಪೇಪರ್ ಸೆಕೆಂಡ್‌ನಲ್ಲಿ ೧, ೩. ೪, ೫, ೬, ಮತ್ತು ೭ನೇ ಪ್ರಶ್ನೆಗಳನ್ನು ಏನು ಕೇಳಿದ್ದಾರೆ ಇವೂ ಕೂಡ ಔಟ್ ಆಫ್ ಸಿಲಬಸ್. ಇದರಲ್ಲೂ ಕೂಡ ವಿದ್ಯಾರ್ಥಿಗಳು ಉತ್ತರವನ್ನು ಬರೆಯುವುದಕ್ಕೆ ಸಾಧ್ಯವಾಗಿಲ್ಲ. ಈ ಪ್ರಶ್ನೆ ಔಟ್ ಆಫ್ ಸಿಲಬಸ್ ಹೌದೋ, ಅಲ್ಲವೋ ಎಂಬುದನ್ನು ಮಾನ್ಯ ಸಚಿವರು ಖಾಶ್ರಿ ಮಾಡಿಕೊಳ್ಳಬೇಕು. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಅನ್ವೇಷಣೆ ಮಾಡಿಸಬೇಕು. ಈಗ ಏನು ಪ್ರಶ್ನೆಗಳನ್ನು ಕೇಳಿದ್ದಾರೆ ಇವುಗಳಿಗೆ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಕ್ಕೆ ಆಗಿಲ್ಲ, ಈಗಾಗಲೇ ಪರೀಕ್ಷೆ ಮುಗಿದುಹೋಗಿದೆ. ಅಂದ ಮೇಲೆ ಮತ್ತೆ ಪರೀಕ್ಷೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ಗ್ರೇಸ್ ಮಾರ್ಕ್ಸ್ ಆದರೂ ಕೊಡಿಸಬೇಕು. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಸೋಮಶೇಖರ್.—ಪ್ರಶ್ನೆಪತ್ರಿಕೆ ತಯಾರಿಸುವವರು ಸಿಲಬಸ್‌ನಲ್ಲಿ ಇಲ್ಲದಿರತಕ್ಕ ವಿಷಯಗಳನ್ನು ಹಾಕುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಸಿಲಬಸ್ ಪ್ರಕಾರ ತಯಾರಿಸಿಲ್ಲದಿದ್ದರೆ ಆಯುಕ್ತರಿಂದ ತನಿಖೆ ಮಾಡಿಸಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ವಿದ್ಯಾರ್ಥಿಗಳಿಗೆ ತೊಂದರೆ ಆಗಿದ್ದರೆ ಗ್ರೇಸ್ ಮಾರ್ಕ್ಸ್ ಕೊಡಿಸಬೇಕೇ ಹೇಗೆ ಎಂಬ ವಿಷಯವನ್ನೂ ಕೂಡ ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಔಟ್ ಆಫ್ ಸಿಲಬಸ್ ಪ್ರಶ್ನೆಗಳನ್ನು ಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಪ್ರಶ್ನೆ ಪತ್ರಿಕೆಗಳು ಬರುವುದಕ್ಕೆ ಮುಂಚೆ ಉತ್ತರ ರೆಡಿ ಇರಲಿಲ್ಲ. ಆದ್ದರಿಂದ ಇದನ್ನು ಸರಿಯಾಗಿ ಪರಿಶೀಲನೆ ಮಾಡಬೇಕು.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ ನಾನು ಇದನ್ನು ಒಪ್ಪಿಕೊಂಡಿದ್ದೇನೆ.

ಶ್ರೀ ಬಿ ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಪತ್ರಿಕೆಗಳನ್ನು ಕೊಡುವಾಗ ಸಿಲಬಸ್ ನೋಡಿ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟಿಲ್ಲ. ಸಿಲಬಸ್ ಕೊಟ್ಟಿರುವುದು ಬೇರೆ ಇದೆ, ಆದರೆ ಇಲ್ಲಿ ಕ್ವೆಶ್ಚನ್ಸ್ ಸೆಟ್ ಮಾಡತಕ್ಕಂಥವರೇ ಬೇರೆ ಇರುತ್ತಾರೆ. ಅವರು ಕೊಟ್ಟಿರತಕ್ಕಂಥದ್ದನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿ ಮಕ್ಕಳಿಗೆ ಸಹಾಯವಾಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಇದರ ಬಗ್ಗೆ ವಿಚಾರಣೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.